2016 ಕ.ತೀ.ವ. 634

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್

ಶ್ರೀಮತಿ ಮರಿಯಮ್ಮ ಮೃತ, ಕಾನೂನು ವಾರಸುದಾರರಿಂದ ಮತ್ತು ಇತರರು
–ವಿರುದ್ಧ– ಶ್ರೀ ಡಿಸ್ಟಿನಪ್ಪ*

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 115ರಡಿಯಲ್ಲಿ ಸಿವಿಲ್ ಪರಿಷ್ಕರಣಾ ಅರ್ಜಿ.

ಅಧಿವಿಚಾರಣಾ ನ್ಯಾಯಾಲಯದಲ್ಲಿ ಪ್ರತಿವಾದಿಗಳಾದ ಪರಿಷ್ಕರಣಾ ಅರ್ಜಿದಾರರು ಅಧಿವಿಚಾರಣಾ ನ್ಯಾಯಾಲಯದಲ್ಲಿ ದಾವೆಯೊಂದರಲ್ಲಿ 1963 ನಿರ್ದಿಷ್ಟ ಪಾಲನಾ ಕಾಯಿದೆಯ ಕಲಂ 28(1), (2) ಮತ್ತು (4)ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಪರಿಷ್ಕರಣಾ ಅರ್ಜಿ ಸಲ್ಲಿಕೆ.

ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ಎದುರುದಾರ/ವಾದಿಯವರಿಗೆ ಸರಿಪಡಿಸಲಾಗದ ಹಾನಿ ಮತ್ತು ನಷ್ಟವುಂಟಾಗುತ್ತಿತ್ತು. ವಾದಿಯವರು ಉಳಿಕೆ ಹಣವನ್ನು ಠೇವಣಿ ಮಾಡುವಲ್ಲಿ ಯಾವುದೇ ವಿಳಂಬವನ್ನು ಮಾಡಿಲ್ಲ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯವನ್ನು ಎತ್ತಿಹಿಡಿದು ಸದರಿ ಅರ್ಜಿಯನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. (2001) 5 ಎಎಲ್‌ಟಿ 235 ಯಲ್ಲಾ ಸಿಂಹಾಚಲಂ –ವಿರುದ್ಧ– ಸಿರಿಪುರಂ ಸೋಮುಲು* | *(ಉಲ್ಲೇ) 7* |

* ಸಿವಿಲ್ ಪರಿಷ್ಕರಣಾ ಅರ್ಜಿ ಸಂ.370/2014, ದಿನಾಂಕ: 9ನೇ ಜುಲೈ, 2015.

2. *2014 (6) ಕರ್ನಾಟಕ. ಎಲ್.ಜೆ. 423*
   *ಟಿ.ಎಲ್. ರಾಜಗೋಪಾಲ್ –ವಿರುದ್ಧ–*
   *ಎಸ್.ಎನ್. ಶಿವಕುಮಾರ್ (ಉಲ್ಲೇ) 12*

3. *2014 (6) ಕರ್ನಾಟಕ. ಎಲ್.ಜೆ.432*
   *ವೀರಪ್ಪ (ಮೃತ) ಕಾನೂನು ವಾರಸುದಾರರು*
   *ಮತ್ತು ಇನ್ನೊಬ್ಬರು –ವಿರುದ್ಧ–*
   *ಬಸವಣ್ಯಪ್ಪ (ಮೃತ) ಕಾನೂನು ವಾರಸುದಾರರು (ಉಲ್ಲೇ) 13*

4. *ಎಐಆರ್ 1986 ಪಂಜಾಬ್ ಮತ್ತು ಹರಿಯಾಣ 152*
   *ಓಂಕಾರ್‌ನಾಥ್ ಮತ್ತು ಇನ್ನೊಬ್ಬರು –ವಿರುದ್ಧ–*
   *ಬಶೀರ್ ಮತ್ತು ಇತರರು (ಉಲ್ಲೇ) 14*

5. *ಎಐಆರ್ 1976 ಎಸ್‌ಸಿ 49*
   *ರಾಮೇಶ್ವರ್ ಮತ್ತು ಇತರರು –ವಿರುದ್ಧ–*
   *ಜೋತ್‌ರಾಮ್ ಮತ್ತು ಇತರರು (ಉಲ್ಲೇ) 14*

ಅರ್ಜಿದಾರರ ಪರ : ಶ್ರೀ ಎಲ್.ಪಿ.ಇ. ರೆಗೋ ಮತ್ತು ಶ್ರೀ ಅರ್ಜುನ್ ರೆಗೋ, ನ್ಯಾಯವಾದಿಗಳು ;
ಎದುರುದಾರರ ಪರ: ಶ್ರೀ ವಿಜಯಕೃಷ್ಣಭಟ್, ನ್ಯಾಯವಾದಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ.ಎಸ್. ಪಾಟೀಲ್**

1. ಓ.ಎಸ್. ಸಂ. 591/1989 ದಾವೆಯಲ್ಲಿನ ಪ್ರತಿವಾದಿಗಳು, ಕರಾರನ್ನು ಹಿಂಪಡೆಯುವುದಕ್ಕಾಗಿ ನಿರ್ದಿಷ್ಟ ಪರಿಹಾರ ಅಧಿನಿಯಮ, 1963 (ಸಂಕ್ಷಿಪ್ತವಾಗಿ 'ಅಧಿನಿಯಮ')ರ 28 (1), (2) ಮತ್ತು (4)ನೇ ಪ್ರಕರಣದ ಅಡಿಯಲ್ಲಿ ತಾವು

ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ್ದನ್ನು ಪ್ರಶ್ನಿಸಿ ಈ ಪರಿಷ್ಕರಣಾ ಅರ್ಜಿಯನ್ನು ದಾಖಲಿಸಿದ್ದಾರೆ.

2. ಸಂಕ್ಷಿಪ್ತವಾಗಿ ವಾಸ್ತವ ಸಂಗತಿಗಳು ಈ ಮುಂದಿನಂತಿವೆ: 26.11.1985ರಂದು ವಾದಿ ಮತ್ತು ಶ್ರೀಮತಿ ಮರಿಯಮ್ಮ – 1ನೇ ಪ್ರತಿವಾದಿಯ ನಡುವೆ ಮಾರಾಟ ಒಪ್ಪಂದವೇರ್ಪಟ್ಟಿತು. 1ನೇ ಪ್ರತಿವಾದಿಯು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಮೂಡಲ ದಾಸಪುರ ಗ್ರಾಮದಲ್ಲಿರುವ 2 ಎಕರೆ 15 ಗುಂಟೆ ಅಳತೆಯ ಜಮೀನಿಗೆ ನೋಂದಾಯಿತ ಕ್ರಯಪತ್ರ ಬರೆದುಕೊಡಲು ಒಪ್ಪಿಕೊಂಡಳು. ಮಾರಾಟ ಪ್ರತಿಫಲವು 25,000/– ರೂ.ಗಳಿಗೆ ಒಪ್ಪಿಗೆಯಾಯಿತು. ಅದರಲ್ಲಿ 15,000/– ರೂ.ಗಳನ್ನು ಮುಂಗಡವಾಗಿ ಸಂದಾಯ ಮಾಡಲಾಯಿತು ಉಳಿದ 10,000/– ರೂ.ಗಳನ್ನು ಕ್ರಯಪತ್ರವನ್ನು ನೋಂದಣಿ ಮಾಡಿಕೊಡುವ ಸಮಯದಲ್ಲಿ ಸಂದಾಯ ಮಾಡಬೇಕಾಗಿತ್ತು. 1ನೇ ಪ್ರತಿವಾದಿಯು ಕ್ರಯಪತ್ರವನ್ನು ಮಾಡಿಕೊಡದಿದ್ದರಿಂದ ವಾದಿಯು 13.01.1989ರಂದು ದಾವೆ ಹೂಡಿದ. ಈ ನಡುವೆ ಒಪ್ಪಂದದ ನಂತರ ಮತ್ತು ದಾವೆಯನ್ನು ಹೂಡುವುದಕ್ಕೆ ಮುಂಚೆ 1ನೇ ಪ್ರತಿವಾದಿಯು ಅದೇ ಜಮೀನಿಗೆ ಸಂಬಂಧಿಸಿದಂತೆ 16.04.1986ರಂದು ಆಕೆಯ ಪುತ್ರಿ 2ನೇ ಪ್ರತಿವಾದಿಯ ಹೆಸರಿನಲ್ಲಿ ಉಡುಗೊರೆಪತ್ರವನ್ನು ಬರೆದುಕೊಟ್ಟು ನೋಂದಣಿ ಮಾಡಿಸಿರುತ್ತಾಳೆ.

3. ಅಧಿವಿಚಾರಣಾ ನ್ಯಾಯಾಲಯವು 03.02.2000ದಂದು ಡಿಕ್ರಿ ಮಾಡುತ್ತದೆ. ಪ್ರತಿವಾದಿಗಳಿಗೆ ಮೂರು ತಿಂಗಳೊಳಗೆ 10,000/– ರೂ.ಗಳನ್ನು ಪಡೆದುಕೊಂಡು ಕ್ರಯಪತ್ರವನ್ನು ಮಾಡಿಕೊಡುವಂತೆ ನಿರ್ದೇಶಿಸುತ್ತದೆ. ಈ ತೀರ್ಪು ಮತ್ತು ಡಿಕ್ರಿಯಿಂದ ಬಾಧಿತರಾದ ಪ್ರತಿವಾದಿಗಳು ಆರ್.ಎ.ಸಂ.21/2000 ಮೇಲ್ಮನವಿಯನ್ನು ದಾಖಲಿಸುತ್ತಾರೆ. ಮೇಲ್ಮನವಿಗೆ ಆರ್.ಎ.ಸಂ.173/2002 ಎಂದು ಮರು ಸಂಖ್ಯೆ ನೀಡಲಾಗುತ್ತದೆ. ಅದು 27.11.2006ರಂದು ವಜಾಗೊಳ್ಳುತ್ತದೆ. ಇದರಿಂದ ಬಾಧಿತರಾದ ಪ್ರತಿವಾದಿಗಳು ಆರ್.ಎಸ್.ಎ.ಸಂ.473/2007ರಲ್ಲಿ ನಿಯತ ಎರಡನೇ

ಮೇಲ್ಮನವಿಯನ್ನು ದಾಖಲಿಸುತ್ತಾರೆ. ಎರಡನೇ ಮೇಲ್ಮನವಿಯು 29.6.2007ರಂದು ಹಿಂತೆಗೆದುಕೊಂಡದ್ದರಿಂದ ವಜಾಗೊಳ್ಳುತ್ತದೆ.

4. ಎರಡನೇ ಮೇಲ್ಮನವಿಯ ಇತ್ಯರ್ಥದ ಅವಧಿಯಲ್ಲಿ 08.03.2007ರಂದು ಕರಾರನ್ನು ಹಿಂಪಡೆಯಲು ಕೋರಿ ಪ್ರತಿವಾದಿಗಳು ಅಧಿನಿಯಮದ 28ನೇ ಪ್ರಕರಣದ ಅಡಿಯಲ್ಲಿ ದಾವೆಯ ಸಂದರ್ಭದಲ್ಲಿ ಅರ್ಜಿಯನ್ನು ಸಲ್ಲಿಸುತ್ತಾರೆ. 30.03.2007ರಂದು ವಾದಿಯು ಮೊತ್ತವನ್ನು ಠೇವಣಿ ಇಡಲು ಅವಧಿ ವಿಸ್ತರಣೆ ಮಾಡುವಂತೆ ಕೋರಿ ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ನಿಯತ ಮೇಲ್ಮನವಿ ಇದ್ದರೂ ಕೂಡ, ವಾದಿಯು ಅವಧಿ ವಿಸ್ತರಣೆ ಕೋರಿ ಅರ್ಜಿ ಸಲ್ಲಿಸಿದ್ದು, ಮೇಲ್ಮನವಿ ನ್ಯಾಯಾಲಯವು ಪ್ರತಿವಾದಿಗಳ ಗಮನಕ್ಕೆ ತರದೆ ಅವಧಿ ವಿಸ್ತರಣೆ ಮಾಡುವಂತೆ ಕೋರಿದ ಅರ್ಜಿಯನ್ನು ದಿನಾಂಕ 17.03.2008ರ ಆದೇಶದ ಮೂಲಕ ಪುರಸ್ಕರಿಸಿತು. ಈ ಆದೇಶವನ್ನು ಪ್ರತಿವಾದಿಗಳು ಇತರ ವಿಷಯಗಳ ಜೊತೆಗೆ ಅರ್ಜಿಯನ್ನು ತಮ್ಮ ಗಮನಕ್ಕೆ ತಾರದೆ ಮತ್ತು ತಮ್ಮ ಅಹವಾಲನ್ನು ಆಲಿಸದೆ ಪುರಸ್ಕರಿಸಲಾಗಿದೆಯೆಂದು ವಾದಿಸಿ ಸಂಕೀರ್ಣ ವ್ಯವಹರಣೆಯಲ್ಲಿ ಪ್ರಶ್ನಿಸುತ್ತಾರೆ. ಈ ಹಿನ್ನೆಲೆಯಲ್ಲಿ ಮತ್ತು ಇತರ ಹಲವಾರು ಕಾರಣಗಳಿಗಾಗಿ ಪ್ರತಿವಾದಿಗಳು ಸಲ್ಲಿಸಿದ ಸಂಕೀರ್ಣ ಅರ್ಜಿಯನ್ನು ಪುರಸ್ಕರಿಸಲಾಯಿತು ಮತ್ತು 10,000/– ರೂ.ಗಳ ಬಾಕಿ ಮೊತ್ತವನ್ನು ಠೇವಣಿ ಮಾಡಲು ವಾದಿಗೆ ಅವಧಿ ವಿಸ್ತರಿಸಿ ನೀಡಿದ ಆದೇಶವನ್ನು ಹಿಂಪಡೆಯಲಾಯಿತು. ತದನಂತರ, ಅಧಿವಿಚಾರಣಾ ನ್ಯಾಯಾಲಯವು ಉಭಯ ಪಕ್ಷಕಾರರು ಸಲ್ಲಿಸಿದ ಅರ್ಜಿಗಳ ಮೇಲೆ ಅವರ ಅಹವಾಲುಗಳನ್ನು ಆಲಿಸಿ, ಕರಾರನ್ನು ಹಿಂಪಡೆಯಲು ಕೋರಿ ಪ್ರತಿವಾದಿಗಳು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿ, ಪ್ರಶ್ನಿತ ಆದೇಶವನ್ನು ಹೊರಡಿಸಿತು. ಈ ಹಿನ್ನೆಲೆಯಲ್ಲಿ, ಪ್ರಸ್ತುತ ಪರಿಷ್ಕರಣಾ ಅರ್ಜಿಯನ್ನು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ದಿನಾಂಕ 25.06.2014ರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿದೆ.

5. ಪರಿಷ್ಕರಣಾ ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಯು ಈ ಮುಂದಿನಂತೆ ತಮ್ಮ ಬಲವಾದ ವಾದವನ್ನು ಮಂಡಿಸಿದ್ದಾರೆ: ಪ್ರಶ್ನಿತ ಆದೇಶವು ಕಾನೂನು ಬಾಹಿರತೆಯಿಂದ ಕೂಡಿದೆ ಮತ್ತು ಉಳಿಕೆ ಮಾರಾಟ ಪ್ರತಿಫಲವನ್ನು ಪಾವತಿಸಲು ತಪ್ಪಿದ ಮತ್ತು ವಿಳಂಬ ಮಾಡಿದ ವಾದಿಯ ಕಡೆಯ ಪ್ರಾಮಾಣಿಕತೆಯ ಕೊರತೆಯನ್ನು ಪರಿಗಣಿಸದೆ ಮತ್ತು ಪ್ರತಿವಾದಿಗಳಿಗೆ ಉಂಟಾದ ತತ್ಪರಿಣಾಮದ ನಷ್ಟ ಮತ್ತು ಹಾನಿಯನ್ನು ಗಮನಕ್ಕೆ ತೆಗೆದುಕೊಳ್ಳದೆ ಅಧೀನ ನ್ಯಾಯಾಲಯವು ಕರಾರನ್ನು ಹಿಂಪಡೆಯುವುದಕ್ಕೆ ನಿರಾಕರಿಸಿ ಪ್ರಶ್ನಿತ ಆದೇಶವನ್ನು ಹೊರಡಿಸಿದೆ ಎಂಬುದು ಮುಖ್ಯವಾದ ಕಾನೂನು ಬಾಹಿರತೆಯಾಗಿದೆ ಎಂದು ವಾದಿಸಿದ್ದಾರೆ. ಮೇಲ್ಮನವಿ ನ್ಯಾಯಾಲಯವು ನಿಯತ ಮೇಲ್ಮನವಿಯನ್ನು ವಜಾಗೊಳಿಸುವಾಗ ಮೊತ್ತವನ್ನು ಪಾವತಿ ಮಾಡುವುದಕ್ಕೆ ಮತ್ತು ಕ್ರಯ ಪತ್ರವನ್ನು ಬರೆದುಕೊಡುವುದಕ್ಕೆ ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿಲ್ಲದಿದ್ದರೂ, ಅದು ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಡಿಕ್ರಿಯನ್ನು ಸ್ಥಿರೀಕರಿಸಿದೆ ಎಂಬ ವಾಸ್ತವ ಸಂಗತಿಯು, ನೋಂದಾಯಿತ ಕ್ರಯಪತ್ರವನ್ನು ಮಾಡಿಕೊಡುವುದಕ್ಕಾಗಿ ಮತ್ತು ಉಳಿಕೆ ಮಾರಾಟ ಪ್ರತಿಫಲದ ಮೊತ್ತ 10,000/– ರೂ.ಗಳನ್ನು ಸಂದಾಯ ಮಾಡುವುದಕ್ಕಾಗಿ ಅಧಿವಿಚಾರಣಾ ನ್ಯಾಯಾಲಯವು ನಿಗದಿಪಡಿಸಿದ ಮೂರು ತಿಂಗಳುಗಳ ಕಾಲಮಿತಿಯು ಎರಡೂ ಪಕ್ಷಕಾರರಿಗೂ ಅನ್ವಯವಾಗುತ್ತದೆ ಮತ್ತು ಅವರನ್ನು ಅದಕ್ಕೆ ಒಳಪಡಿಸುತ್ತದೆ ಎಂಬ ಅಂಶವನ್ನು ಬಹಿರಂಗಪಡಿಸುತ್ತದೆ. ಆದ್ದರಿಂದ, ವಾದಿಯು ನಿಯತ ಮೇಲ್ಮನವಿಯಲ್ಲಿ ನೀಡಿದ ತೀರ್ಪಿನ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಎಂದರೆ 27.02.2007ರಂದು ಅಥವಾ ಅದಕ್ಕೂ ಮುಂಚೆ 10,000/– ರೂ. ಮೊತ್ತಗಳನ್ನು ಪಾವತಿ ಮಾಡಬೇಕಾಗಿರುತ್ತದೆ ಎಂದು ವಾದಿಸಿದ್ದಾರೆ. ವಾದಿಯು ಉಳಿಕೆ ಮಾರಾಟ ಪ್ರತಿಫಲ ಮೊತ್ತವನ್ನು ಸಂದಾಯ ಮಾಡಲು ತಪ್ಪಿದ್ದಾರೆ, ಆದ್ದರಿಂದ, ಕರಾರನ್ನು ಹಿಂಪಡೆಯಬಹುದಾಗಿದೆಯೆಂದು 1ನೇ ಪ್ರತಿವಾದಿಯು ಅಧಿವಿಚಾರಣಾ ನ್ಯಾಯಾಲಯದ ಗಮನಕ್ಕೆ ತಂದು ಅಧಿನಿಯಮದ 28ನೇ ಪ್ರಕರಣದ ಅಡಿಯಲ್ಲಿ 08.03.2007ರಂದೇ ಅರ್ಜಿ ಸಲ್ಲಿಸಿದ್ದರೆ, ಪ್ರತಿವಾದಿಯು ಅರ್ಜಿ ಸಲ್ಲಿಸಿದ ನಂತರ ಮಾತ್ರವೇ ವಾದಿಯು ಮೊತ್ತವನ್ನು ಸಂದಾಯ ಮಾಡಲು ಅವಧಿ ವಿಸ್ತರಿಸುವಂತೆ ಕೋರಿ 30.03.2007ರಂದು ಅರ್ಜಿ ಸಲ್ಲಿಸಿದ್ದಾರೆಂಬುದನ್ನು ಒತ್ತಿ

ಹೇಳಿದ್ದಾರೆ. ಹೊರಡಿಸಲಾದ ಡಿಕ್ರಿಯನ್ನು ಮತ್ತು ಕಾಲ ಪರಿಮಿತಿಯನ್ನು ಪಕ್ಷಕಾರರು ಪಾಲಿಸಬೇಕೆಂದು ಅಗತ್ಯಪಡಿಸಲಾಗಿದೆ ಎಂಬುದನ್ನು ತಾವು ಒತ್ತಿ ಹೇಳಿರುವ ಹಿನ್ನೆಲೆಯಲ್ಲಿ ಅಧೀನ ನ್ಯಾಯಾಲಯವು ಪ್ರತಿವಾದಿಗಳು ಸಲ್ಲಿಸಿದ ಅರ್ಜಿಯನ್ನು ನಿರಾಕರಿಸಿರುವುದು ಸರಿಯಾದುದಲ್ಲ ಮತ್ತು ಸಮರ್ಥನೀಯವೂ ಅಲ್ಲವೆಂದು ವಾದಿಸಿ, ಅವರ ವಾದಗಳಿಗೆ ಬೆಂಬಲವಾಗಿ, ಈ ಕೆಳಕಂಡ ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ:

(i) ***ಟಿ.ಎಲ್. ರಾಜಗೋಪಾಲ್ –ವಿರುದ್ಧ– ಎಸ್.ಎನ್. ಶಿವಕುಮಾರ್ – (2014)6 ಕೆಎಆರ್ ಎಲ್.ಜೆ. 423***

(ii) ***ರಾಮೇಶ್ವರ್ ಮತ್ತು ಇತರರು –ವಿರುದ್ಧ– ಜೋತ್ ರಾಮ್ ಮತ್ತು ಇತರರು – ಎಐಆರ್ 1976 ಎಸ್‌ಸಿ 49,***

(iii) ***ಓಂಕಾರ್ ನಾಥ್ ಮತ್ತು ಇನ್ನೊಬ್ಬರು –ವಿರುದ್ಧ– ಬಶೀರ್ ಮತ್ತು ಇತರರು – ಎಐಆರ್ 1986 ಪಂಜಾಬ್ ಮತ್ತು ಹರಿಯಾಣ 152***

(iv) ***ವೀರಪ್ಪ (ಮೃತ) ಕಾನೂನು ವಾರಸುದಾರರ ಮೂಲಕ ಮತ್ತು ಇನ್ನೊಬ್ಬರು –ವಿರುದ್ಧ– ಬಸವಣ್ಣಪ್ಪ (ಮೃತ) ಕಾನೂನು ವಾರಸುದಾರರ ಮೂಲಕ–(2014) 6 ಕೆಎಆರ್ ಎಲ್‌ಜೆ 432.***

6. ಎದುರುದಾರನ ಪರ ಮಾನ್ಯ ನ್ಯಾಯವಾದಿಯು ಈ ವಾದಗಳನ್ನು ಬಲವಾಗಿ ಖಂಡಿಸಿ, ಈ ಮುಂದಿನಂತೆ ತಮ್ಮ ವಾದವನ್ನು ಮಂಡಿಸಿದರು. ಪ್ರತಿವಾದಿಗಳು ಆರ್.ಎ.ಸಂ. 21/2000 (ಹೊಸ ನಂ.173/2002) ರಲ್ಲಿ ಸಲ್ಲಿಸಿದ ಮೇಲ್ಮನವಿಯ ಇತ್ಯರ್ಥದ ಅವಧಿಯಲ್ಲಿ ಡಿಕ್ರಿಗೆ ಮಧ್ಯಂತರ ತಡೆಯಾಜ್ಞೆಯಿದ್ದು,

ಅದು 27.11.2006ರಂದು ಮೇಲ್ಮನವಿಯು ವಜಾಗೊಳ್ಳುವವರೆಗೆ ಜಾರಿಯಲ್ಲಿತ್ತು. ನಿಯತ ಮೇಲ್ಮನವಿಯಲ್ಲಿ ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಆರ್.ಎಸ್.ಎ. ಸಂ. 473/2007ರಲ್ಲಿ ಈ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಯಿತು. ನಿಯತ ಎರಡನೇ ಮೇಲ್ಮನವಿಯು 29.06.2007ರವರೆಗೆ ಇತ್ಯರ್ಥದಲ್ಲಿದ್ದಾಗ ವಾದಿಯು ಕೇವಿಯಟ್ ಸಲ್ಲಿಸಿದ್ದರು ಎಂದು ಅವರು ವಾದಿಸಿದರು. ಆದ್ದರಿಂದ, ನಿಯತ ಮೇಲ್ಮನವಿಯ ಇತ್ಯರ್ಥದ ಅವಧಿಯಲ್ಲಿ ಅಥವಾ ಆ ವಿಷಯಕ್ಕೆ ಸಂಬಂಧಿಸಿದಂತೆ ನಿಯತ ಎರಡನೇ ಮೇಲ್ಮನವಿಯು ಈ ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವಾಗ ಮೊತ್ತವನ್ನು ಸಂದಾಯ ಮಾಡದಿರುವುದು ಪ್ರಾಮಾಣಿಕವಾದ ಉದ್ದೇಶ ಅಥವಾ ಕಾರಣವಾಗಿದೆಯೆಂದು ಪರಿಗಣಿಸಬೇಕಾಗುತ್ತದೆ ಎಂಬ ಬಗ್ಗೆ ಬೊಟ್ಟು ಮಾಡಿ ತೋರಿಸಿದ್ದಾರೆ. ನಿಯತ ಎರಡನೇ ಮೇಲ್ಮನವಿಯು ವಜಾಗೊಳ್ಳುವುದಕ್ಕಿಂತ ಮುಂಚೆಯೂ ಕೂಡ 08.03.2007ರಂದು ಪ್ರತಿವಾದಿಗಳು ಕರಾರನ್ನು ಹಿಂಪಡೆಯಲು ಕೋರಿ ಅರ್ಜಿ ಸಲ್ಲಿಸಿದ್ದರು ಮತ್ತು ವಾದಿಗೆ ಸಂಬಂಧಿಸಿದಂತೆಯೂ ವಾದಿಯು ನಿಯತ ಎರಡನೇ ಮೇಲ್ಮನವಿಯು ವಿಲೇಯಾಗುವುದಕ್ಕಿಂತ ಸಾಕಷ್ಟು ಮುನ್ನವೇ ಮೊತ್ತವನ್ನು ಸಂದಾಯ ಮಾಡುವುದಕ್ಕೆ ಅವಧಿ ವಿಸ್ತರಿಸುವಂತೆ ಕೋರಿ 30.03.2007ರಂದು ಅರ್ಜಿ ಸಲ್ಲಿಸಲು ಕ್ರಮ ಕೈಗೊಂಡಿದ್ದಾರೆಂಬ ಬಗ್ಗೆ ಗಮನ ಸೆಳೆದಿದ್ದಾರೆ. ಆದ್ದರಿಂದ, ಇದು ಮಾರಾಟ ಒಪ್ಪಂದವನ್ನು ಹಿಂಪಡೆಯುವುದಕ್ಕಾಗಿ ಅಧಿನಿಯಮದ 28(1)ನೇ ಪ್ರಕರಣದಲ್ಲಿ ನಿರೂಪಿಸಿದ ಪರಿಣಾಮವನ್ನು ಉಂಟು ಮಾಡುವಂಥ, ಬಾಕಿ ಮೊತ್ತವನ್ನು ಸಂದಾಯ ಮಾಡುವಲ್ಲಿ ವಾದಿಯು ಅನುಚಿತ ವಿಳಂಬ ಮಾಡಿದ ತಪ್ಪಿತಸ್ಥನಾಗಿದ್ದಾನೆಂದು ಹೇಳುವ ಸಂದರ್ಭ ಇದಲ್ಲ ಎಂದು ಅವರು ಬಲವಾಗಿ ವಾದಿಸಿ, ತಮ್ಮ ವಾದಕ್ಕೆ ಬೆಂಬಲವಾಗಿ ಈ ಕೆಳಕಂಡ ತೀರ್ಪುಗಳನ್ನು ಆಧಾರವಾಗಿಟ್ಟುಕೊಂಡಿದ್ದಾರೆ:

(i) ***ಅಶೋಕ್ ಕ್ಯಾಟರರ್ಸ್ –ವಿರುದ್ಧ– ಮುನ್ಸಿಪಲ್ ಕಾರ್ಪೋರೇಷನ್ ಆಫ್ ಗ್ರೇಟರ್ ಬಾಂಬೆ – (1997) 9 ಎಸ್‌ಸಿಸಿ 220***

(ii) ***ನಾಗರಥಿನವ್ -ವಿರುದ್ಧ- ವೇಲಮ್ಮಾಳ್ - (2000) 1 ಮದ್ರಾಸ್ ಎಲ್.ಜೆ.712.***

7. ಸಿವಿಲ್ ಪ್ರಕ್ರಿಯಾ ಸಂಹಿತೆಯ 115ನೇ ಪ್ರಕರಣದ ಅಡಿಯಲ್ಲಿ ಪರಿಷ್ಕರಣಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಈ ನ್ಯಾಯಾಲಯದ ಮಧ್ಯಪ್ರವೇಶವನ್ನು ಅಗತ್ಯಪಡಿಸುವ ನ್ಯಾಯಿಕ ವಿಫಲತೆಗೆ ಕಾರಣವಾಗುವ ಯಾವುದೇ ಅಧಿಕಾರ ವ್ಯಾಪ್ತಿ ದೋಷವನ್ನಾಗಲಿ ಅಥವಾ ಯಾವುದೇ ಕಾನೂನುಬಾಹಿರತೆಯನ್ನಾಗಲಿ ಅಧೀನ ನ್ಯಾಯಾಲಯ ಮಾಡಿಲ್ಲ ಎಂದೂ ಕೂಡ ಎದುರುದಾರನ ಪರ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ. ಅವರ ಈ ವಾದಕ್ಕೆ ಬೆಂಬಲವಾಗಿ, ***ಯಲ್ಲಾ ಸಿಂಹಾಚಲಂ -ವಿರುದ್ಧ- ಸಿರಿಪುರಂ ಸೋಮುಲು***[1] ಮೊಕದ್ದಮೆಯಲ್ಲಿ ಆಂಧ್ರಪ್ರದೇಶ ಉಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಆಧಾರವಾಗಿಟ್ಟುಕೊಂಡಿದ್ದಾರೆ.

8. ಎರಡೂ ಕಡೆಯ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ಮೇಲೆ, ಪರಿಗಣನೆಗಾಗಿ ಉದ್ಭವವಾಗುವ ಏಕಮಾತ್ರ ವಿವಾದಾಂಶವೆಂದರೆ,-

> ಮಾರಾಟ ಒಪ್ಪಂದವನ್ನು ಹಿಂಪಡೆಯಲು ಕೋರಿ ಪ್ರತಿವಾದಿಗಳು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವಾಗ ಅಧೀನ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ಕಾನೂನು ಬಾಹಿರವಾಗಿ ಅಥವಾ ಮಹತ್ವದ ಅಕ್ರಮತೆಯಿಂದ ಕಾರ್ಯ ನಿರ್ವಹಿಸಿದೆಯೇ? ಎಂಬುದಾಗಿದೆ.

9. ಯಾವುದೇ ದಾವೆಯಲ್ಲಿ, ಸ್ಥಿರ ಸ್ವತ್ತಿನ ಮಾರಾಟ ಅಥವಾ ಗುತ್ತಿಗೆಗೆ ಸಂಬಂಧಿಸಿದ ಕರಾರಿನ ನಿರ್ದಿಷ್ಟ ನಿರ್ವಹಣೆಗಾಗಿ ಡಿಕ್ರಿಯನ್ನು ಮಾಡಿರುವಲ್ಲಿ

1. (2001) 5 ಎಎಲ್‌ಟಿ 235

ಮತ್ತು ಖರೀದಿದಾರ ಅಥವಾ ಗುತ್ತಿಗೆ ಪಡೆದವನು ಡಿಕ್ರಿಯ ಮೂಲಕ ಅನುಮತಿಸಲಾದ ಅವಧಿಯೊಳಗೆ ಅಥವಾ ನ್ಯಾಯಾಲಯವು ವಿಸ್ತರಿಸಿದಂಥ ಇತರ ಕಾಲಾವಧಿಯೊಳಗೆ ಆದೇಶಿಸಲಾದಂತೆ ಖರೀದಿ ಹಣವನ್ನು ಸಂದಾಯ ಮಾಡದಿದ್ದಲ್ಲಿ ಮಾರಾಟಗಾರನು ಕರಾರನ್ನು ಹಿಂಪಡೆಯಲು ಅರ್ಜಿ ಸಲ್ಲಿಸಬಹುದು ಮತ್ತು ಹಾಗೆ ಅರ್ಜಿ ಸಲ್ಲಿಸಿದ ಮೇಲೆ ನ್ಯಾಯಾಲಯವು ಆ ಕರಾರನ್ನು ಹಿಂಪಡೆಯಬಹುದು. ಆದ್ದರಿಂದ, ಡಿಕ್ರಿಯನ್ನು ಹೊರಡಿಸಿದ ನ್ಯಾಯಾಲಯವು ಕರಾರನ್ನು ಹಿಂಪಡೆಯುವ ಅಧಿಕಾರವನ್ನು ಹೊಂದಿದೆ ಮತ್ತು ಡಿಕ್ರಿಯಲ್ಲಿ ಆದೇಶಿಸಿದಂತೆ ಹಣವನ್ನು ಸಂದಾಯ ಮಾಡುವ ಸಂಬಂಧ ಕಾಲಾವಧಿ ವಿಸ್ತರಿಸುವ ವಿವೇಚನಾಧಿಕಾರವನ್ನೂ ಕೂಡ ಹೊಂದಿದೆ. ಈ ಮೊಕದ್ದಮೆಯಲ್ಲಿ ಪರಿಗಣಿಸಬೇಕಾದ ಪ್ರಶ್ನೆಯೇನೆಂದರೆ, ಅಧೀನ ನ್ಯಾಯಾಲಯವು ಸದೃಢವಾದ ನ್ಯಾಯಿಕ ಮೂಲ ತತ್ವಗಳಿಗೆ ಅನುಸಾರವಾಗಿ ತನ್ನ ವಿವೇಚನಾಧಿಕಾರವನ್ನು ಚಲಾಯಿಸಿದೆಯೇ ಅಥವಾ ಅಂಥ ಅಧಿಕಾರ/ವಿವೇಚನಾಧಿಕಾರವನ್ನು ಚಲಾಯಿಸುವಲ್ಲಿ ಕಾನೂನು ಬಾಹಿರವಾಗಿ ಅಥವಾ ಮಹತ್ವದ ಅಕ್ರಮತೆಯಿಂದ ಕಾರ್ಯ ನಿರ್ವಹಿಸಿದೆಯೇ ಎಂಬುದಾಗಿದೆ.

10. ಡಿಕ್ರಿಯಿಂದ ಬಾಧಿತರಾಗಿದ್ದ ಪರಿಷ್ಕರಣಾ ಅರ್ಜಿದಾರರು ನಿಯತ ಮೇಲ್ಮನವಿ ಸಂಖ್ಯೆ 21/2000ರಲ್ಲಿ 03.02.2000ದಂದು ನಿಯತ ಮೇಲ್ಮನವಿಯನ್ನು ಸಲ್ಲಿಸಿದ್ದರು. ಆ ಮೇಲ್ಮನವಿಯು 27.11.2006ರ ವರೆಗೆ ಇತ್ಯರ್ಥದಲ್ಲಿತ್ತು. ತೀರ್ಪು ಮತ್ತು ಡಿಕ್ರಿಯ ನಿರ್ವಹಣೆಗೆ ಮಧ್ಯಂತರ ತಡೆಯಾಜ್ಞೆ ಇತ್ತು. ಆದ್ದರಿಂದ, ಈ ಅವಧಿಯಲ್ಲಿ 10,000/- ರೂ.ಗಳ ಬಾಕಿ ಮೊತ್ತವನ್ನು ಸಂದಾಯ ಮಾಡದಿರುವುದನ್ನು ಅಪ್ರಾಮಾಣಿಕವಾದುದೆಂದು ವಿವರಿಸಬಹುದಾದ ನಡತೆಯೆಂದು ಅರ್ಥೈಸಲಾಗದು. ಅದೇ ರೀತಿ, ನಿಯತ ಮೇಲ್ಮನವಿಯು ವಿಲೆಯಾದ ನಂತರವೂ ಕೂಡ ಆ ವಿಷಯವು ಅಂತಿಮತೆ ಕಾಣಲಿಲ್ಲ. ಪ್ರತಿವಾದಿಗಳು ಆರ್.ಎಸ್.ಎ ಸಂಖ್ಯೆ 473/2007ರಲ್ಲಿ ನಿಯತ ಎರಡನೇ ಮೇಲ್ಮನವಿಯನ್ನು ದಾಖಲಿಸಿದರು. ವಾದಿಯು ಕೇವಿಯಟ್ ಸಲ್ಲಿಸಿದನು. ಆತನಿಗೆ ನಿಯತ ಎರಡನೇ ಮೇಲ್ಮನವಿ ಸಲ್ಲಿಸಿರುವುದರ ಬಗ್ಗೆ ಅರಿವಿತ್ತು. ನಿಯತ ಎರಡನೇ ಮೇಲ್ಮನವಿಯ ಅಂಗೀಕಾರವು

29.06.2007ರ ವರೆಗೆ ಇತ್ಯರ್ಥದಲ್ಲಿತ್ತು. ವಾದಿಯು ಆ ವಿರಾಮದ ಮಧ್ಯಕಾಲದಲ್ಲಿ ಆ ಮೊತ್ತವನ್ನು ಸಂದಾಯ ಮಾಡದಿರುವುದು ಅಧೀನ ನ್ಯಾಯಾಲಯವು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಪ್ರತಿವಾದಿಗಳು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸುತ್ತಾರೆಂಬ ಊಹೆಯ ಕಾರಣದಿಂದಲೇ ಎನ್ನಬಹುದಾಗಿದೆ. ಹಾಗಾಗಿ, ಆತನು ನಿಯತ ಎರಡನೇ ಮೇಲ್ಮನವಿಯ ಫಲಿತಾಂಶವನ್ನು ಪ್ರಾಮಾಣಿಕವಾಗಿ ಕಾಯುತ್ತಿದ್ದ. ಅಂತಿಮವಾಗಿ 29.06.2007ರಂದು ಸದರಿ ವ್ಯವಹರಣೆಗಳು ಕೊನೆಗೊಂಡವು. ಆದ್ದರಿಂದ, ಎರಡನೇ ಮೇಲ್ಮನವಿಯ ಇತ್ಯರ್ಥದ ಅವಧಿಯಲ್ಲಿ ಬಾಕಿ 10,000/– ರೂ.ಗಳ ಮೊತ್ತವನ್ನು ಸಂದಾಯ ಮಾಡುವಲ್ಲಿ ಆದ ವಾದಿಯ ಕಡೆಯ ಲೋಪವನ್ನು ಕೂಡ ಅವಧಿ ವಿಸ್ತರಿಸುವಂತೆ ಕೋರಲು ವಾದಿಯನ್ನು ಅನರ್ಹಗೊಳಿಸುವ ಲೋಪವೆಂದು ಹೇಳಲಾಗದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪ್ರತಿವಾದಿಗಳೇ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಡಿಕ್ರಿಯನ್ನು ಪ್ರಶ್ನಿಸಿದ್ದರಿಂದ ಮತ್ತು ಕೆಳ ಮೇಲ್ಮನವಿ ನ್ಯಾಯಾಲಯದ ಮುಂದೆ ಮಧ್ಯಂತರ ತಡೆಯಾಜ್ಞೆ ಪಡೆದಿದ್ದರಿಂದ ಮತ್ತು ಆ ನಂತರ, ಮೇಲ್ಮನವಿಯು ವಜಾಗೊಂಡ ಮೇಲೆ ಉಚ್ಚ ನ್ಯಾಯಾಲಯದ ಮುಂದೆ ನಿಯತ ಎರಡನೇ ಮೇಲ್ಮನವಿ ವ್ಯವಹರಣೆ ನಡೆಸುತ್ತಿದ್ದುದರಿಂದ ಅವರಿಗೆ ವಾದಿಯು ಅವಧಿ ವಿಸ್ತರಣೆ ಕೋರಲು ಕಾನೂನಿನಲ್ಲಿ ಹಕ್ಕನ್ನು ಹೊಂದಿಲ್ಲವೆಂದು ಹೇಳಲು ಅವಕಾಶವಿಲ್ಲ ಮತ್ತು ಪ್ರತಿವಾದಿಗಳು ಕರಾರನ್ನು ಹಿಂಪಡೆಯುವ ಕೋರಿಕೆಯನ್ನು ಸಲ್ಲಿಸುವ ನಿಹಿತ ಅಧಿಕಾರವನ್ನು ಪಡೆದುಕೊಂಡಿದ್ದು, ಅದನ್ನು ಕೆಳ ನ್ಯಾಯಾಲಯವು ಆದೇಶಿಸಬೇಕಾಗಿದೆ.

11. ವಿಷಯ ಇಂತಿರುವಾಗ, ಕರಾರನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದ ಅಂಶವನ್ನು ತೀರ್ಮಾನಿಸಲು ಯಾವ ನ್ಯಾಯಾಲಯವನ್ನು ಕೋರಲಾಯಿತೋ ಆ ನ್ಯಾಯಾಲಯವು ತನ್ನ ವಿವೇಚನಾಧಿಕಾರವನ್ನು ಚಲಾಯಿಸಬೇಕಾಗುತ್ತದೆ ಮತ್ತು ಆ ವಿವೇಚನಾಧಿಕಾರವನ್ನು ಸದೃಢವಾದ ನ್ಯಾಯಿಕ ಮೂಲತತ್ವಗಳ ಮೇಲೆ ಚಲಾಯಿಸಬೇಕಾಗುತ್ತದೆ. ವ್ಯವಹರಣೆಗಳ ಇತ್ಯರ್ಥವನ್ನು ಗಮನದಲ್ಲಿಟ್ಟುಕೊಂಡು ಮತ್ತು 15,000/– ರೂ.ಗಳ ಗಣನೀಯ ಮೊತ್ತವನ್ನು ಈಗಾಗಲೇ ಪಾವತಿಸಲಾಗಿದೆ ಹಾಗೂ ಉಳಿದಂತೆ ಪಾವತಿಸಲು ಸಂದಾಯ ಮಾಡಲು ಅಗತ್ಯವಿರುವ ಮೊತ್ತ

10,000/– ರೂ.ಗಳಾಗಿದೆ ಎಂಬ ವಾಸ್ತವ ಸಂಗತಿಯನ್ನು ಗಮನದಲ್ಲಿ ಇಟ್ಟುಕೊಂಡು ಪ್ರತಿವಾದಿಗಳು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವ ಮೂಲಕ ಕರಾರನ್ನು ಹಿಂಪಡೆಯಲು ನಿರಾಕರಿಸಿ ಅಧೀನ ನ್ಯಾಯಾಲಯವು ಚಲಾಯಿಸಿದ ವಿವೇಚನಾಧಿಕಾರವನ್ನು ಕಾನೂನುಬಾಹಿರವಾದುದೆಂದು ಅರ್ಥೈಸಲಾಗದು.

12. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಯು ಆಧಾರವಾಗಿಟ್ಟುಕೊಂಡ ತೀರ್ಪುಗಳು ವಿವಿಧ ವಾಸ್ತವಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ ನೀಡಿದ ತೀರ್ಪುಗಳಾಗಿವೆ. ***ಟಿ.ಎಲ್. ರಾಜಗೋಪಾಲ್ –ವಿರುದ್ಧ– ಎಸ್.ಎನ್. ಶಿವಕುಮಾರ್*** [2], ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಸದರಿ ಮೊಕದ್ದಮೆಯ ವಾಸ್ತವ ಸಂಗತಿಗಳ ಮೇಲೆ, ಆ ಮೊಕದ್ದಮೆಯಲ್ಲಿನ ವಾದಿಯು, ಡಿಕ್ರಿಯಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಅಥವಾ ಕೊನೇ ಪಕ್ಷ ಜಾರಿ ಅರ್ಜಿಯನ್ನು ದಾಖಲಿಸುವ ದಿನಾಂಕದಂದು 2,85,000/– ಮಾರಾಟ ಪ್ರತಿಫಲ ಮೊತ್ತವನ್ನು ಸಂದಾಯ ಮಾಡಲು ತಪ್ಪಿದ್ದಾನೆಂದು ನಿರ್ಣಯಿಸಿದೆ. ಡಿಕ್ರಿಯನ್ನು ಹೊರಡಿಸಿದ ಸರಿಸುಮಾರು 8 ವರ್ಷಗಳ ನಂತರ ಮತ್ತು ಕರಾರಿನ ದಿನಾಂಕದಿಂದ 14 ವರ್ಷಗಳ ನಂತರ ಆತನು ಆ ಹಣವನ್ನು ಸಂದಾಯ ಮಾಡಲು ನಿಶ್ಚಯಿಸಿರುತ್ತಾನೆ. ಆ ಮಧ್ಯ ವಿರಾಮ ಕಾಲದಲ್ಲಿ ಡಿಕ್ರಿಗೆ ತಡೆಯಾಜ್ಞೆಯಾಗಿತ್ತು ಎಂದು ತೋರಿಸುವುದಕ್ಕೆ ಯಾವ ಸಾಕ್ಷ್ಯಾಧಾರಗಳೂ ಇರಲಿಲ್ಲ ಮತ್ತು ಅವಧಿ ವಿಸ್ತರಿಸುವಂತೆ ಕೋರಲು ಅಲ್ಲಿನ ವಾದಿಗೆ ಯಾವುದೇ ಪ್ರಾಮಾಣಿಕವಾದ ಕಾರಣಗಳೂ ಇರಲಿಲ್ಲ. ಈ ಮೊಕದ್ದಮೆಯಲ್ಲಿನ ಪರಿಸ್ಥಿತಿಯು ಈಗಾಗಲೇ ಮೇಲೆ ವಿವರಿಸಿರುವಂತೆ ಸಂಪೂರ್ಣವಾಗಿ ವಿಭಿನ್ನವಾದುದಾಗಿದೆ. ಹಾಗಾಗಿ, ಈ ತೀರ್ಪು ಪ್ರಸ್ತುತ ಮೊಕದ್ದಮೆಯ ವಾಸ್ತವ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

13. ಅದೇ ರೀತಿ, ***ವೀರಪ್ಪ (ಮೃತ) ಕಾನೂನು ವಾರಸುದಾರರು ಮತ್ತು ಇನ್ನೊಬ್ಬರು –ವಿರುದ್ಧ– ಬಸವಣ್ಯಪ್ಪ (ಮೃತ), ಕಾನೂನು ವಾರಸುದಾರರು*** [3],

2. 2014 (6) ಕರ್ನಾಟಕ ಎಲ್.ಜೆ. 423

3. 2014 (6) ಕರ್ನಾಟಕ ಎಲ್.ಜೆ.432

ಮೊಕದ್ದಮೆಯಲ್ಲಿನ ತೀರ್ಪೂ ಸಹ ಪ್ರಸುತ ಮೊಕದ್ದಮೆಯ ಸಂಗತಿಗಳ ಮೇಲೆ ಆಧರಿಸಿರುವಂತಹುದ್ದಲ್ಲ. ಏಕೆಂದರೆ, ಸದರಿ ಮೊಕದ್ದಮೆಯಲ್ಲಿ ವಾದಿಯು ಜಾರಿ ಅರ್ಜಿಯನ್ನು ದಾಖಲಿಸಿದ್ದರೆ, ಪ್ರತಿವಾದಿಯು ಕರಾರನ್ನು ಹಿಂಪಡೆಯಲು ಕೋರಿದ್ದ. 25.09.1978ರಂದು ಅಧಿವಿಚಾರಣಾ ನ್ಯಾಯಾಲಯವು ನೀಡಿದ್ದ ನಿರ್ದಿಷ್ಟ ನಿರ್ವಹಣಾ ಡಿಕ್ರಿಯನ್ನು ಮೇಲ್ಮನವಿಯಲ್ಲಿ 30.03.1982ರಂದು ನಿಯತ ಮೇಲ್ಮನವಿಯನ್ನು ವಜಾಗೊಳಿಸುವ ಮೂಲಕ ಸ್ಥಿರೀಕರಿಸಲಾಯಿತು ಮತ್ತು 2010ನೇ ಇಸವಿಯಲ್ಲಿ ಜಾರಿ ವ್ಯವಹರಣೆಗಳು ಪ್ರಾರಂಭಗೊಂಡವು. ಆ ಹಿನ್ನೆಲೆಯಲ್ಲಿ, ಸದರಿ ಮೊಕದ್ದಮೆಯಲ್ಲಿ ವಾದಿಯು ವಿವರಿಸಲಾಗದೆ ಉಳಿದ ವಿಪರೀತ ವಿಳಂಬವನ್ನು ಗಮನದಲ್ಲಿಟ್ಟುಕೊಂಡು ಈ ನ್ಯಾಯಾಲಯವು, ಅಧೀನ ನ್ಯಾಯಾಲಯವು ಆದೇಶಿಸಿದಂತೆ ಕರಾರನ್ನು ಹಿಂಪಡೆಯುವುದು ಸರಿಯಾದುದಾಗಿದೆ ಮತ್ತು ಸಮರ್ಥನೀಯವಾಗಿದೆ ಎಂದು ಅಭಿಪ್ರಾಯಪಟ್ಟಿತ್ತು.

14. ಅದೇ ರೀತಿ, ***ಓಂಕಾರ್‌ನಾಥ್ ಮತ್ತು ಇನ್ನೊಬ್ಬರು –ವಿರುದ್ಧ– ಬಶೀರ್ ಮತ್ತು ಇತರರು*** [4]**,** ಮೊಕದ್ದಮೆಯಲ್ಲಿ ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿ ಒಳಗೊಂಡಿರುವ ಸಂಗತಿಗಳು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಹೋಲಿಕೆಯಾಗುವುದಿಲ್ಲ. ***ರಾಮೇಶ್ವರ್ ಮತ್ತು ಇತರರು –ವಿರುದ್ಧ– ಜೋತ್‌ರಾಮ್ ಮತ್ತು ಇತರರು*** [5]**,** ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅದರಲ್ಲಿ ನಿರೂಪಿಸಲಾದ ಅನುಪಾತವು, ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಿದ ದಿನಾಂಕದಂದು ಇದ್ದಂತೆ ಪರಿಹಾರದ ಹಕ್ಕನ್ನು ತೀರ್ಮಾನಿಸಬೇಕು ಮತ್ತು ಶಾಸನದ ಮೂಲಕ ನಿಹಿತವಾದ ಹಕ್ಕುಗಳನ್ನು ತಪ್ಪಿಸುವಂತಿಲ್ಲ ಎಂಬಷ್ಟು ಮಟ್ಟಿಗೆ ಆ ನಂತರದ ಬೆಳವಣಿಗೆಗಳು ಆತನ ಹಕ್ಕುಗಳನ್ನು ಕಸಿಯಬಾರದು

4. ಎಐಆರ್ 1986 ಪಂಜಾಬ್ ಮತ್ತು ಹರಿಯಾಣ 152

5. ಎಐಆರ್ 1976 ಎಸ್‌ಸಿ 49

ಎಂಬ ಸಾಮಾನ್ಯ ಮೂಲತತ್ವಕ್ಕೆ ಸಂಬಂಧಪಟ್ಟಿದೆ. ಈ ಮೂಲ ತತ್ವವು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯಿಸುವುದಿಲ್ಲ. ಇಲ್ಲಿ ಕರಾರನ್ನು ಹಿಂಪಡೆಯಲು ಕೋರುವ ಅಂಥ ಯಾವುದೇ ನಿಹಿತವಾದ ಹಕ್ಕಿಲ್ಲ. ಪರಿಷ್ಕರಣಾ ಅರ್ಜಿದಾರರು – ಪ್ರತಿವಾದಿಗಳಿಗೆ ಕರಾರನ್ನು ಹಿಂಪಡೆಯಲು ಕೋರಿ ಅರ್ಜಿ ಸಲ್ಲಿಸುವ ಹಕ್ಕಿದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ, ಆದರೆ ಆ ಹಕ್ಕು, ಪ್ರತಿಯೊಂದು ಮೊಕದ್ದಮೆಯ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಗಮನದಲ್ಲಿಟ್ಟುಕೊಂಡು ನ್ಯಾಯಾಲಯವು ಚಲಾಯಿಸುವ ವಿವೇಚನಾಧಿಕಾರಕ್ಕೆ ಒಳಪಟ್ಟಿರುತ್ತದೆ.

15. ಪ್ರಸ್ತುತ ಮೊಕದ್ದಮೆಯಲ್ಲಿ, ಕರಾರನ್ನು ಹಿಂಪಡೆಯುವುದಕ್ಕಾಗಿ ಪ್ರತಿವಾದಿಗಳು ಮಾಡಿದ ಕ್ಲೇಮನ್ನು ಒಪ್ಪಲಾಗದು ಎಂಬ ನಿರ್ಣಯಕ್ಕೆ ಬರುವಾಗ ಅಧೀನ ನ್ಯಾಯಾಲಯವು ಸಂಬಂಧಪಟ್ಟ ಎಲ್ಲಾ ವಾಸ್ತವ ಸಂಗತಿಗಳನ್ನು, ಅದರಲ್ಲೂ ವಿಶೇಷವಾಗಿ ಮೇಲ್ಮನವಿಯು ಇತ್ಯರ್ಥದಲ್ಲಿರುವುದು, ಮಧ್ಯಂತರ ತಡೆಯಾಜ್ಞೆ ಅಸ್ತಿತ್ವದಲ್ಲಿರುವುದು ಮತ್ತು ನಿಯತ ಎರಡನೇ ಮೇಲ್ಮನವಿಯಲ್ಲಿ ಪ್ರಾರಂಭಿಸಿದ ತದನಂತರದ ವ್ಯವಹರಣೆಗಳನ್ನು ಗಮನಕ್ಕೆ ತೆಗೆದುಕೊಂಡಿದೆ. ಹೌದು, 1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಹೆಸರಿಗೆ ದಾವೆಯನ್ನು ದಾಖಲಿಸಿದ ನಂತರ ಉಡುಗೊರೆ ಪತ್ರವನ್ನು ಮಾಡಿಕೊಟ್ಟಿದ್ದಾನೆ ಎಂದು ಅಧೀನ ನ್ಯಾಯಾಲಯವು ನಿರ್ಣಯಿಸಿರುವಲ್ಲಿ ವಾಸ್ತವಿಕ ಸಂಗತಿಯು ತಪ್ಪಾಗಿರುವುದು ನಿಜ. ವಾಸ್ತವವಾಗಿ, ಉಡುಗೊರೆ ಪತ್ರವನ್ನು ದಾವೆಯನ್ನು ದಾಖಲಿಸಿದ ನಂತರ ಮಾಡಿಕೊಡದೆ, ದಾವೆಯನ್ನು ದಾಖಲಿಸುವ ಮುಂಚೆಯೇ, ಆದರೆ ಮಾರಾಟ ಒಪ್ಪಂದವು ಜಾರಿಯಾದ ನಂತರ ಮಾಡಿಕೊಡಲಾಗಿತ್ತು. ಇದಿಷ್ಟೇ ಯಾವುದೇ ರೀತಿಯಲ್ಲೂ ಅಧೀನ ನ್ಯಾಯಾಲಯವು ಮಾಡಿದ ನಿರ್ಣಯವನ್ನು ಕಲುಷಿತಗೊಳಿಸುವುದಿಲ್ಲ.

16. ಅಧೀನ ನ್ಯಾಯಾಲಯವು ತನ್ನ ವಿವೇಚನಾಧಿಕಾರವನ್ನು ಚಲಾಯಿಸಿ, ಪ್ರತಿವಾದಿಯು ಸಲ್ಲಿಸಿದ ಕರಾರು ಹಿಂಪಡೆಯುವ ಕೋರಿಕೆಯನ್ನು ನಿರಾಕರಿಸುವಾಗ ಸಂಪೂರ್ಣ ಪರಿಸ್ಥಿತಿಗಳನ್ನು ಗಮನಕ್ಕೆ ತೆಗೆದುಕೊಂಡಿದೆ. ಒಂದು ವೇಳೆ, ಅರ್ಜಿಯನ್ನು

ಪುರಸ್ಕರಿಸಿ, ಮಾರಾಟ ಕರಾರನ್ನು ಹಿಂಪಡೆದಿದ್ದರೆ, ಹಲವಾರು ದಶಕಗಳಿಂದ ಆ ವಿಷಯದ ಬಗ್ಗೆ ವ್ಯಾಜ್ಯವನ್ನು ನಡೆಸಿಕೊಂಡು ಬಂದ ವಾದಿಗೆ ಸರಿಪಡಿಸಲಾಗದ ಹಾನಿ ಮತ್ತು ನಷ್ಟ ಸಂಭವಿಸುತ್ತಿತ್ತು. ಅಧೀನ ನ್ಯಾಯಾಲಯವು ಸರಿಯಾಗಿಯೇ ನಿರ್ಣಯಿಸಿರುವಂತೆ, ಮಾರಾಟ ಪ್ರತಿಫಲ ಮೊತ್ತದ ಬಾಕಿಯನ್ನು ಸಂದಾಯ ಮಾಡಲು ಆಗಿರುವ ವಿಳಂಬದಲ್ಲಿ ವಾದಿಯ ಕಡೆಯಿಂದ ಯಾವುದೇ ಅಪ್ರಾಮಾಣಿಕತೆ ಕಂಡು ಬರುವುದಿಲ್ಲ. ಯಾವುದೇ ಕಾನೂನು ಬಾಹಿರತೆಯಿಲ್ಲ ಅಥವಾ ಯಾವುದೇ ಕಾನೂನು ವಿಫಲತೆಯೂ ಆಗಿಲ್ಲ.

17. ಆದ್ದರಿಂದ, ಪರಿಷ್ಕರಣಾ ಅರ್ಜಿಯು ಗುಣಾರ್ಹತೆ ರಹಿತವಾದುದಾಗಿದ್ದು, ಅದನ್ನು ವಜಾಗೊಳಿಸಲಾಗಿದೆ.

---